ವೆಂದು ಹೇಳಿ ಬಂದಿದ್ದೆ. ಹೋದ ಸಾರಿ ಸದನ ನಡೆಯುವಾಗ ಪುನಃ ಮಾನ್ಯ ಸದಸ್ಯರು ಈ ಪಶುವೈದ್ಯ ಶಾಲೆಯನ್ನು ಯಾವಾಗ ಮಂಜೂರು ಮಾಡುತ್ತೀರೆಂದು ಪ್ರಶ್ನೆಯನ್ನು ಹಾಕಿದ್ದರು. ಸಿಬ್ಬಂದಿ ಪೂರೈಕೆಯಾದ ಮೇಲೆ ಅಲ್ಲಿಗೆ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡುತ್ತೇನೆಂದು ನಾನು ಹೇಳಿದ್ದುದು ನಿಜ. ಆದರೆ, ೧೯೮೭-೮೮ನೇ ಸಾಲಿಗೆ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿರುವುದರಿಂದ, ಇನ್ನು ಮುಂದೆ ಪಶುವೈದ್ಯಶಾಲೆಗಳನ್ನು ಜಿಲ್ಲಾಪರಿಷತ್ತಿನವರೇ ಮಂಜೂರು ಮಾಡುತ್ತಾರೆ. ಜಿಲ್ಲಾ ಪರಿಷತ್ತಿಗೆ ಅಧಿಕಾರ ವರ್ಗಾವಣೆಯಾಗಿರುವುದರಿಂದ ನಾನು ಭರವಸೆ ಕೊಟ್ಟು ತಪ್ಪಿಸಿಕೊಳ್ಳುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಸರ್ಕಾರದ ಹತ್ತಿರ ಅಧಿಕಾರ ಇದ್ದಿದ್ದರೆ ಮಂಜೂರು ಮಾಡಬಹುದಾಗಿತ್ತು. ಮಾನ್ಯ ಸದಸ್ಯರೂ ಸಹ ಜಿಲ್ಲಾ ಪರಿಷತ್ತಿನ ಸದಸ್ಯರಾಗಿರುವುದರಿಂದ, ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಮಾತನಾಡಿ ಪಶುವೈದ್ಯಶಾಲೆಯನ್ನು ಮಂಜೂರು ಪಡೆದುಕೊಳ್ಳಬೇಕೆಂಬುದೇ ನನ್ನ ಉತ್ತರ.

ಛೇರ್ಮನ್.—ಮಾನ್ಯ ಶಿವಣ್ಣನವರೇ ತಾವು ಓದಿ,

ಶ್ರೀ ಎಂ. ಶಿವಣ್ಣ.—ನನ್ನ ಹತ್ತಿರ ಎಕ್ಸೆಟ್ರಾ ಕಾಪಿ ಇಲ್ಲ. ಒಂದು ಕಾಪಿ ಕೊಡಿಸಬೇಕು.

ಶ್ರೀ ಎಂ. ರಘುಪತಿ.—ಅವರು ಒಂದು ಕಾಪಿ ಇಟ್ಟುಕೊಳ್ಳಬೇಕಾಗಿತ್ತು.

ಶ್ರೀ ಯು. ಭೂಪತಿ.—ನಮಗೆ ಒಬೊಬ್ಬ ಪ್ರೈವೇಟ್ ಸೆಕ್ರೆಟರಿಯನ್ನು ಕೊಡಿ.

ಶ್ರೀ ಎಂ. ರಘುಪತಿ.—ನಾನೂ ಸದಸ್ಯನಾಗಿ ಕೆಲಸ ಮಾಡಿದ ಅನುಭವ ಇದೆ.

೫) ಬಾಲ ವಿಕಾಸ ಯೋಜನೆಯಲ್ಲಿ ನಡೆಯುತ್ತಿರುವ ಉಪಹಾರ ಕೇಂದ್ರಗಳಿಗೆ ೧೯೮೭-೮೮ನೇ ಸಾಲಿನ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ತೊಂದರೆಯಾಗಿರುವುದು

ಶ್ರೀ ಸಿ. ಎಂ. ಉದಾಸಿ.—ಕೇಂದ್ರ ಸರ್ಕಾರದ ಮತಿಯಿಂದ ರಾಜ್ಯದಲ್ಲಿ ಬಾಲವಿಕಾಸ ಯೋಜನೆಯಲ್ಲಿ ನಡೆಯತ್ತಿರುವ ಉಪಹಾರ ಕೇಂದ್ರಗಳಿಗೆ ಧನಸಹಾಯ ೧೯೮೭-೮೮ನೇ ಸಾಲಿಗೆ ಬಿಡುಗಡೆ ಮಾಡದೇ ಇರುವುದರಿಂದ ಉಪಹಾರ ಕೇಂದ್ರಗಳ ಶಿಕ್ಷಕಿ, ಆಯಾಗಳಿಗೆ ಸಂಬಳ ಸಿಗದೇ ಇರುವುದು ಹಾಗೂ ಆಹಾರ ಪುರವಟೆ ಮಾಡಿದ ಸಂಸ್ಥೆಗಳಿಗೆ ಹಣ ಸಂದಾಯ ಕಳೆದ ೬ ತಿಂಗಳುಗಳಿಂದ ಆಗದೆ ಇರುವುದು, ಕೆಲವು ತಾಲ್ಲೂಕುಗಳಲ್ಲಿ ಈ ಯೋಜನೆ ಬಂದು ಮಾಡುವ ಪರಿಸ್ಥಿತಿ ಇದ್ದದ್ದು ಸರ್ಕಾರದ ಗಮನಸೆಳೆಯುತ್ತೇನೆ.

ಶ್ರೀ ಜಿ. ಬಸವಣಪ್ಪ.—ಕೇಂದ್ರ ಪುರಸ್ಕೃತ ಗೋಧಿ ಆಧಾರಿತ ಉಪಹಾರ ಕಾರ್ಯಕ್ರಮದಡಿಯಲ್ಲಿ ಉಪಹಾರ ಕೇಂದ್ರಗಳನ್ನು ರಾಜ್ಯ ಏಕೀಕೃತ ಬಾಲವಿಕಾಸ ಯೋಜನೆ ಘಟಕಗಳಲ್ಲಿ ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಉಪಯೋಗಕ್ಕಾಗಿ ೧೯೮೬-೮೭ ರಿಂದ ಪ್ರಾರಂಭಿಸಲಾಗಿದೆ. ಈಗ ರಾಜ್ಯದಲ್ಲಿ ಒಟ್ಟು ೧೩೮೭ ಉಪಹಾರ ಕೇಂದ್ರಗಳು ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿವೆ.

೧೯೮೭-೮೮ನೇ ವಾರ್ಷಿಕ ಆಯವ್ಯಯದಲ್ಲಿ ಈ ಯೋಜನೆಗೆ ಹಣ ಒದಗಿಸುವುದಿಲ್ಲ ಆದುದರಿಂದ ಈ ಯೋಜನೆಗೆ ೬೯ ಲಕ್ಷ ರೂ. ಗಳನ್ನು ಸಾಧಿಲ್ವಾರು ನಿಧಿಯಿಂದ (ಯೋಜನೆ) ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪರಿಷತ್ತುಗಳಿಗೆ ಹಣ ಒದಗಿಸಲು ಸರ್ಕಾರಿ ಆದೇಶವನ್ನು ಶೀಘ್ರದಲ್ಲೇ ಹೊರಡಿಸಲಾಗುವುದು.

೬) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಲಹಾ ಸಮಿತಿಗಳನ್ನು ರಚಿಸುವಾಗ ಸ್ಥಳೀಯ ಶಾಸಕರನ್ನು ಕೈಬಿಟ್ಟಿರುವುದು

ಶ್ರೀ ಎಂ. ಶಿವಣ್ಣ.—ರಾಜ್ಯದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಲಹಾ ಸಮಿತಿಗಳನ್ನು ರಚಿಸುವ ಸಂದರ್ಭದಲ್ಲಿ ಸರಕಾರವು ಸ್ಥಳೀಯ ಗಣ್ಯವ್ಯಕ್ತಿಗಳ ಪಟ್ಟಿಯಲ್ಲಿ ಸ್ಥಳೀಯ ಶಾಸಕರನ್ನು ಕೈಬಿಡಲಾಗಿದೆ.

ತಾ. ೧೫-೭-೮೭ ರಂದು ಸರ್ಕಾರವು ಒಂದು ಆದೇಶವನ್ನು ಹೊರಡಿಸಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸದಸ್ಯರು ಹಾಗೂ ಪುರಸಭಾಧ್ಯಕ್ಷರು, ಸ್ಥಳೀಯ ವ್ಯಾಪಾರಸ್ಥರು ಇವರನ್ನು ಸದಸ್ಯರನ್ನಾಗಿ ಮಾಡಲಾಗಿದೆ. ಸ್ಥಳೀಯ ಶಾಸಕರನ್ನು ಈ ಸಲಹಾ ಸಮಿತಿಗಳಲ್ಲಿ ಸೇರಿಸದಿರುವ ಉದ್ದೇಶವೇನೆಂದು

ತಿಳಿಯುತ್ತಿಲ್ಲ. ಸ್ಥಳೀಯ ಕಾಲೇಜುಗಳ ಸರ್ವತೋಮುಖ ಬೆಳವಣಿಗೆಗೆ ಶಾಸಕರ ಪಾತ್ರವು ಆಗತ್ಯವಾಗಿರುತ್ತದೆ. ಆದ್ದರಿಂದ ಕಾಲೇಜುಗಳ ಸಲಹಾ ಸಮಿತಿಗಳಲ್ಲಿ ಶಾಸಕರನ್ನು ಸೇರಿಸಿ ಅವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸುವುದು ಸೂಕ್ತವಾಗಿದೆ. ಈ ವಿಷಯದಲ್ಲಿ ಮಾನ್ಯ ಶಿಕ್ಷಣ ಮಂತ್ರಿಗಳಕ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವುದಲ್ಲದೆ, ಸರಕಾರದ ಆಜ್ಞೆಯನ್ನು ಈ ಮೂಲಕ ಕಳುಹಿಸುತ್ತಿದ್ದೇನೆ. ಮತ್ತು ಸರ್ಕಾರದ ಕ್ರಮ ಏನೆಂಬ ಬಗ್ಗೆ ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಇದು ಹಿಂದೆಯೇ ನಾವು ಆಜ್ಞೆ ಮಾಡಿದ್ದು. ಶಾಸಕರು ಯಾರಿದ್ದಾರೆ, ಅವರುಗಳು ತಮ್ಮ ಕ್ಷೇತ್ರದಲ್ಲಿನ ಫಸ್ಟ್‌ಗ್ರೇಡ್ ಮತ್ತು ಜೂನಿಯರ್ ಕಾಲೇಜುಗಳಲ್ಲಿನ ಸಲಹಾ ಸಮಿತಿಗೆ ಅಧ್ಯಕ್ಷರಾಗಿ ಇರಬೇಕೆಂದು ಇತ್ತು. ಈಗ ಅದನ್ನು ಬದಲಾಣೆ ಮಾಡಿರಬಹುದು ಆದರೆ ಜಿಲ್ಲಾಪರಿಷತ್ತು ಮತ್ತು ಇತರರನ್ನು ಸೇರಿಸಿದ್ದಾರೆ. ಆದರೂ ಕೂಡ ಶಾಸಕರನ್ನು ಮುಂದುವರಿಸುವುದಕ್ಕೆ ಕೂಡಲೇ ಸರಕಾರದ ಆದೇಶದ ಬಗ್ಗೆ ಪ್ರಯತ್ನ ಮಾಡುತ್ತೇವೆ. ಎಂದು ಹೇಳಬಯಸುತ್ತೇನೆ.

(೭) ಪುತ್ತೂರು ತಾಲ್ಲೂಕಿನಲ್ಲಿ ರಬ್ಬರ್ ಸಂಸ್ಕರಣ ಮಾಡುವವರಿಗೆ ಅರಣ್ಯ ಪ್ಲಾಂಟೇಷನ್ ಅಧಿಕಾರಿಗಳಿಂದ ಕಿರುಕುಳ ಆಗುತ್ತಿರುವ ಬಗ್ಗೆ

ಶ್ರೀ ಕೆ. ಕುಶಾಲ (ಸುಳ್ಯ).—ದಕ್ಷಿಣ ಕನ್ನಡ ಜಿಲ್ಲೆಯ, ಸುಳ್ಯ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಕರ್ನಾಟಕ ರಬ್ಬರ್ ಪ್ಲಾಂಟೆ ಶನ್ ಎಂಬ ಸಂಸ್ಥೆ ಕರ್ನಾಟಕ ಸರಕಾರದ ವತಿಯಿಂದ ಸುಮಾರು ೧೮ ವರ್ಷಕ್ಕೆ ಮೇಲ್ಪಟ್ಟು, ೧೩,೩೭೮ ಎಕ್ರೆ ರಬ್ಬರ್ ತೋಟ ಹೊಂದಿರುವುದು. ಈ ಸಂಸ್ಥೆಗೆ ಅತೀ ಕಮ್ಮಿ ಎಂದರೆ ತಿಂಗಳೊಂದರ ಒಂದು ಕೋಟಿ ರೂಪಾಯಿ ಆದಾಯ ಬರಬೇಕು. ಹೀಗಿರುವಲ್ಲಿ ಈ ಸಂಸ್ಥೆಯ ಗುಣ ಎಂದರೆ ಸಧ್ಯದಲ್ಲಿಯೇ ಮುಂದುವರಿದು ತೊರಿಕೆಗೆ ಪುಸ್ತಕದಲ್ಲಿ ಒಂದು ನವೂನೆ ಅಜೆಸ್ಟ್‌ಮೆಂಟು ಲೆಕ್ಕಾಚಾರದಲ್ಲಿ ಇದೆ ಎಂದು ಸಾಧಾರಣ ಎಲ್ಲರಿಗೂ ತೀಳಿದ ವಿಷಯ. ರಬ್ಬರು ಬೆಳೆಯಾಗಲೀ, ರಬ್ಬರು ಪ್ಯಾಕ್ಟರಿಗಳಾಗಲಿ, ಯಾವುದೇ ರಬ್ಬರು ವ್ಯವಹಾರವಾಗಲಿ ಸಂಪೂರ್ಣ ಕೇಂದ್ರ ಸರಕಾರದ ವತಿಯಿಂದ ನಡೆಯಲ್ಪಡುತ್ತಿರುವ, ಈ ರಬ್ಬರು ಬೋರ್ಡು, ರಬ್ಬರು, ಕೃಷಿಕರಿಗೆ. ಸಬ್ಸಿಡಿ ಸಹಾಯ ಧನವನ್ನು ನೀಡಿ, ಖಾಸಗಿ ರಬ್ಬರು ಬೆಳೆಸುವುವವರು ಸಾಧ್ಯವಿರುವ ಎಲ್ಲಾ ಕಡೆ ರಬ್ಬರು ಬೆಳೆಸಿರುತ್ತಾರೆ. ಇದರಲ್ಲಿ ರಬ್ಬರ್ ಸಂಸ್ಕರಣಾ ಕಾರ್ಖಾನೆಗಳನ್ನು ನಡೆಸಲು ಉಮೇದ್ವಾರರು ರಬ್ಬರು ಬೋರ್ಡಿಗೆ ಅರ್ಜಿ ಸಲ್ಲಿಸಿ, ಕೂಲಂಕುಷ ಪರಿಶೀಲನೆ ನಡೆಸಿ, ಅಧಿಕಾರಿಗಳು (ರಬ್ಬರ್ ಬೋರ್ಡ್) ಸಾಧ್ಯವಿದ್ದವರಿಗೆ, ಪರವಾನಿಗೆ ನೀಡಿರುತ್ತಾರೆ. ಈ ಪರವಾನಿಗೆ ಸಿಕ್ಕಿದ ನಂತರ ಅರ್ಜಿದಾರರು ಕಾರ್ಖಾನೆಗಳನ್ನು ನಡೆಸಲು, ವಾಣಿಜ್ಯ, ಹಣಕಾಸು ಸಂಸ್ಥೆಗಳಿಗೆ ಹಣ ಹಾಗೂ ಸಹಾಯ ಧನಕ್ಕೆ ಅರ್ಜಿ ಸಲ್ಲಿಸಿದವರಿಗೆ, ಈ ಸಂದರ್ಭದಲ್ಲಿ ಮೇಲೆ ಹೇಳಿದ ಕರ್ನಾಟಕ ರಬ್ಬರ್ ಪ್ಲಾಂಟೇಶನ್ ಕಾರ್ಪೊರೇಶನ್ನಿಗೆ ಉನ್ನತ ಅಧಿಕಾರಿಗಳು ತಮ್ಮ ಪ್ರಭಾವವನ್ನು ಹಣಕಾಸು ನಿಗಮ ಗಳಿಗೆ ಬೀರಿ ಖಾಸಗಿ ರಬ್ಬರ್ ಕಾರ್ಖಾನೆಗಳನ್ನು ಮಾಡುವವರಿಗೆ ಉತ್ತೇಜನ ಕೊಡಬೇಡಿ, ಸಾಲ ನೀಡಬೇಡಿ, ಇದರಿಂದ ಸಂಸ್ಥೆಗೆ ತೊಂದರೆಯಾಗುತ್ತದೆ ಎಂದು ಕೈಗಾರಿಕಾ ಇಲಾಖೆ ಅಧಿಕಾರಿಗಳಿಗೂ, ಇಂತಹ ಕಾರ್ಖಾನೆಗಳಿಗೆ ಪರವಾನಿಗೆ ನೀಡಬಾರದು ಎಂದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಮೇದ್ವಾರಿಯ ರಬ್ಬರ್ ಸಂಸ್ಕರಣಾಲಯ, ಪರವಾನಿಗೆ (ಲೈಸನ್ಸ್) ಸಧ್ಯ ಹೊಂದಿರುವವರನ್ನು ಕಷ್ಟಕ್ಕೆ ಹಾಗೂ ನಷ್ಟಕ್ಕೆ ಒಳಪಡಿಸಿರುವುದು ತಿಳಿದು ಬರುತ್ತದೆ. ಹೀಗಾದರೆ, ಈ ರಬ್ಬರ್ ಬೆಳೆಯುವವರ ರಬ್ಬರನ್ನು ಯಾರು ಸಂಸ್ಕರಿಸ ಬೇಕು ? ಆಥವಾ ಈ ರಬ್ಬರ್ ವ್ಯವಹಾರವನ್ನು ಕರ್ನಾಟಕದಲ್ಲಾಗಲೀ, ದಕ್ಷಿಣ ಕನ್ನಡ ಜಿಲ್ಲೆಯಲ್ಲಾಗಲಿ ಯಾರು ಮಾಡಬೇಕು. ಕರ್ನಾಟಕ ರಬ್ಬರ್ ಪ್ಲಾಂಟೇಶನ್ ಕಾರ್ಪೊರೇಷನ್‌ನವರೇ ತಮ್ಮಲ್ಲಿ ಸಂಸ್ಕರಿಸಿದ ಹಾಗೂ ಸಂಸ್ಕರಿಸದೇ ಇದ್ದ ರಬ್ಬರನ್ನು ಪ್ರತೀ ತಿಂಗಳಿಗೊಮ್ಮೆ ಏಲಂ ಮಾಡುತ್ತಿರುವರು. ಇಲ್ಲಿ ಸ್ವಾರಸ್ಯಕವಾದ ವಿಷಯವೇನೆಂದರೆ, ಕರ್ನಾಟಕ ಪ್ಲಾಂಟೇಶನ್ ಕಾರ್ಪೊರೇಷನ್‌ನವರೇ ಹೇಳುವ ಮಾತು, ಖಾಸಗಿಯವರು ರಬ್ಬರು ಪ್ಯಾಕ್ಟರಿ ನಡೆಸಿದರೆ ನಮ್ಮ ಪ್ಲಾಂಟೇಶನ್ನಿನ ರಬ್ಬರು ಕುದ್ದು ಮಾರಾಟವಾಗಿ, ಖಾಸಗಿಯವರಿಗೆ ಹೋಗುವುದು ಎಂದು. ಈ ವಿಚಾರದಲ್ಲಿ ಹೇಳುವುದಾದರೆ ಈ ಕಾರ್ಪೊರೇಷನ್ನಲ್ಲಿ ಸಾವಿರಾರು ಸಿಬ್ಬಂಧಿಗಳು ಇದ್ದಾರೆ, ಒಂದು ಪೋಲೀಸು ಘಟಕ ಇದೆ. ಹಲವಾರು ಜೀಲಪುಗಳು, ಕೋವಿಗಳು ಇರುವುವು. ಪ್ಲಾಂಟೇಶನ್ ಸೂಪರಿಂಟೆಂಡೆಂಟ್‌ರುಗಳು, ಗಾರ್ಡಗಳು, ಮೇಸ್ತ್ರಿಗಳು, ಇತರ ಹಲವಾರು ಸಿಬ್ಬಂಧಿಗಳು ಇರುವಾಗ ಈ ಮೇಲಿನ ಕಾರಣ ಕೊಡುವುದು, ಸಂಪೂರ್ಣ ಆಧಾರರಹಿತ ಮತ್ತು ಬೇಜವಾಬ್ದಾರಿ ತನದ ವಿಷಯವಾಗಿದೆ. ಹಾಗದರೆ ಇದರ ಕಾರಣ ಎನು ಇರಬಹುದು ? ಈಗ ಕೇರಳದಲ್ಲಿ ರಬ್ಬರ್ ಪ್ಲಾಂಟೇಷನ್ ಕಾರ್ಪೊರೇಷನ್ ಇದೆ ಅವರದೇ ರಬ್ಬರ್ ತೋಟ ಸಂಸ್ಕರಣ ಘಟಗಳಿವೆ. ಕೇರಳದಲ್ಲಿ ಖಾಸಗಿ ರಬ್ಬರ್ ಪರಿಷ್ಕರಣ ಘಟಕಗಳು ಇರುವಷ್ಟು, ಕಾರ್ಖಾನೆಗಳು, ಭಾರತ ದೇಶದಲ್ಲಿ ಇನ್ನೆಲ್ಲೂ ಇರುವುದಿಲ್ಲ.